ಮೈಸೂರ ಗೆಜೆಟ್

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಮಾರ್ಚೀ ತಾ॥ 12, ಸ್ಯ 1887.

ಗಜೆಟ್ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಜೀಫ್ ಜಡ್ಜ್‌ರು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಿನ್ಯಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.
ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಪರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನ್‌ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಕ್ಸ್‌ಚೇಸ್‌ಮೆಂಟ್ ಯಾನೇ ಪರಾ ಬಗ್ಯೆ ಇದರಡಿ ರುಜಾ ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡಿಮ್ಯಾಂಡ್ ಡ್ರಾಫ್ಟ್‌ಗಳು ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಸ್‌ಚೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್ಟ್ರೋಲರ್.

ಸರ್‌ಕಿಲರ್ ಲೆಟರ್ ನಂಬರು 4—3875 ಮಾರ್ಕ್ಡಂ 3ನೇ ಮಾರ್ಚೀ 1887ನೇ ಇಸವಿ.

ಕಾಂಪ್ಟ್ರೋಲರ್ ಯವರು ಕೋರುವದೇನಂದರೆ, ಡೆಪ್ಯುಟಿ ಕಮ್ಮಿಷನರು, ಡಿಸ್ಟ್ರಿಕ್ಟು ಜಡ್ಜ್‌ರು ಮತ್ತು ಸಬ್ ಡಿವೀರ್ಜ್ ಆಫಿಸರುಗಳು ಸುದಾ ಅವೆರಲ್ಲಿಯೂ ಅವರ ತಾಬೇದಾರ್ ಆಫೀಸರ್‌ಗಳಲ್ಲಿಯೂ ಇರತಕ್ಕ ಪರಮೆನೆಂಟ್ ಯಾನೆ ಕಾಯಂ ಅಡ್ವಾನ್ಸು ಮೊಬಲಗಿನ ವಂದು ತಖ್ತೆಯನ್ನು ತಯಾರ್‌ಮಾಡಿಸಿ 1887ನೇ ಇಸವಿ ಏಪ್ರೆಲ್ 1ನೇ ತಾರೀಖಿನಲ್ಲಿ ಈ ಆಫೀಸಿಗೆ ಕಳುಹಿಸಬೇಕಾಗಿರುತ್ತೆ. ಅಮಲ್‌ದಾರರುಗಳ ಸರ್‌ಟಿಫಿಕೇಟ್‌ಗಳು, ಅವರು ಯಾರ ತಾಬೇಯಲ್ಲಿರುತ್ತಾರೋ ಅಂಥಾ ಡೆಪ್ಯುಟಿ ಕಮ್ಮಿಷನರ್ ಯಾ ಸಬ್ ಡಿವೀರ್ಜ್ ಆಫೀಸರರಿಗೆ ಕಳುಹಿಸಲ್ಪಟ್ಟು ಸದರೀ ಆಫೀಸರರು ಅವುಗಳನ್ನ ತಮ್ಮ ತಖ್ತೆಯಲ್ಲಿ ಕೇರಿಸತಕ್ಕದ್ದು.

ಎ. ರಂಗಸ್ವಾಮಯ್ಯಂಗಾರ್,
ಕಾಂಪ್ಟ್ರೋಲರ್.